ಇಂಗ್ಲೀಷಿನಲ್ಲಿಯೇ ಮಾತನಾಡಬೇಕೆಂಬ ನಿಯಮ. ಹತ್ತಿರವಿರುವ ಇತರೆ ಭಾರತೀಯರೊಂದಿಗೆ ಸೇರುವಂತಿಲ್ಲ. ಸವಿತಾಗೆ ಪಿಯಾನೊ, ಬ್ಯಾಲೆ ಪಾಠಗಳು. ಸುನಿಲನಿಗೆ ಟೆನಿಸ್ ಮತ್ತು ಫುಟ್‌ಬಾಲ್. ಮನೆಯಲ್ಲಿ ಅವರಿಗೆ ರೊಟ್ಟಿ, ತಾಲಿಗಿಂತ ಹೆಚ್ಚಾಗಿ ಚಿಕನ್ ಮತ್ತು ಲ್ಯಾಂಬ್ ದೊರಕುತ್ತಿತ್ತು. ಸವಿತಾ ತಾಯಿತಂದೆಯರಿಗೆ ವಿಧೇಯಳಾಗಿಯೇ ನಡೆದುಕೊಂಡಳು. ಓದಿನಲ್ಲಿ ಸಾಧಾರಣ. ರೂಪವಿತ್ತು. ಕಾಲೇಜಿನಲ್ಲಿ ಇರುವಾಗಲೇ ಅಗರ್ವಾಲರ ಭಾರತೀಯ ಪಾಲುದಾರರೊಬ್ಬರ ಮಗ ನವೀನನಲ್ಲಿ ಅವಳಿಗೆ ಅನುರಾಗ ಬೆಳೆಯಿತು. ಇಂತಹ ಅವಕಾಶವನ್ನು ಬಿಡುತ್ತಾರೆಯೇ ತಂದೆತಾಯಿ? ಮದುವೆಯೂ ಆಯಿತು. ಒಜ್ಜೆ ಎನಿಸಲಿಲ್ಲ ಇಟ್ಟ ಹೆಜ್ಜೆ; ಸವಿತಾ ಗಂಡನೊಡನೆ ಸುಖವಾಗಿ ಬಾಳತೊಡಗಿದಳು. ಅಳಿಯನೂ ತನ್ನ ಪಾರ್ಟನರ್ ಆದ; ಅಗರ್ವಾಲರ ಉದ್ದಿಮೆಗೂ ಇದು ಮತ್ತಷ್ಟು ಸಹಕಾರಿಯಾಯಿತು.

ಸುನಿಲ್ ಹಾಗಲ್ಲ. ಚಿಕ್ಕ ವಯಸ್ಸಿನಿಂದಲೇ ಸ್ವಾತಂತ್ರ ಬಯಸಿದ್ದ. ಎಲ್ಲದಕ್ಕೂ ತನ್ನದೇ ಹಾದಿ. ಸದಾ ಮಾತು, ಚರ್ಚೆ. ರಾಗಿಣಿ ಮತ್ತು ಅಗರ್ವಾಲ್ ಅವರಿಗೆ ರೋಸಿಹೋಗುತ್ತಿತ್ತು. ಅವನು ತೀರಾ ಬುದ್ಧಿವಂತ. ಟೆಲಿವಿಷನ್ ನೋಡುವುದು ಬೇಡ ಎಂದಾಗ ಅದರಲ್ಲಿ ಶೈಕ್ಷಣಿಕ ಪ್ರೊಗ್ರಾಮ್ ಬರುತ್ತಿದೆ ಎಂದು ಸಾಧಿಸಿ ನೋಡಿಯೇ ತೀರುತ್ತಿದ್ದ. ಹೊರಗೆ ಚಳಿ, ಸ್ವೆಟರ್ ಹಾಕಿಕೋ ಎಂದರೆ ಹೊರಗಿರುವ ಹತ್ತು ಡಿಗ್ರಿಗೆ ಸ್ವೆಟರ್ ಅಗತ್ಯವಿಲ್ಲ ಎಂದು ಚರ್ಚೆಗೆ ನಿಲ್ಲುತ್ತಿದ್ದ. ಓದಿನಲ್ಲಿ ಮುಂದಾದ, ತನ್ನ ಕ್ಲಾಸಿನಲ್ಲಿ ಯಾವಾಗಲೂ ಮೊದಲ ರ್‍ಯಾಂಕ್ ಗಿಟ್ಟಿಸುತ್ತಿದ್ದ. ಹೀಗೆಯೇ ಓದಿ ಅವನು ಸ್ಪೆಷಲಿಸ್ಟ್ ಡಾಕ್ಟರ್ ಆಗಲಿ ಎಂಬುದು ಅಪ್ಪಅಮ್ಮಂದಿರ ಆಸೆ. ಆಗ ದೊಡ್ಡದೊಂದು ಮೆಡಿಕಲ್ ಸೆಂಟರ್ ಪ್ರಾರಂಭಿಸಬಹುದು ಎಂದು ತಂದೆಯ ಎಣಿಕೆ. ಆದರೆ, ಅವನು ಕಾಲೇಜಿನಲ್ಲಿ ಲಾ(ಕಾನೂನು) ಆರಿಸಿಕೊಂಡಾಗ ಎಲ್ಲರಿಗೂ ನಿರಾಶೆ ಆಯಿತು. ಇದೆಂತಹ ಓದು ಎಂದು ತಂದೆ ವ್ಯಥೆ ಪಟ್ಟರು; ಅದನ್ನು ಸುನಿಲ್ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಬದಲಾಗಿ ನ್ಯೂಯಾರ್ಕ್ ಬಿಟ್ಟು ಚಿಕಾಗೋ ವಿಶ್ವವಿದ್ಯಾಲಯ ಸೇರಿದ; ಕಾರಣ ಅವನಿಗೆ ಅಲ್ಲಿ ವಿದ್ಯಾರ್ಥಿವೇತನ ದೊರೆಯಿತು. ಇಷ್ಟು ದಿವಸ ಕಣ್ಣ ಮುಂದಿದ್ದ ಮಗ ಈಗ ಇನ್ನೆಲ್ಲೋ ಹೋದ. ಓದು ಮುಗಿಯಿತು, ಡಿಗ್ರಿ ಬಂದಾಯ್ತು. ಅಮೆರಿಕಾದಲ್ಲಿ ಕಾನೂನಿನ ಬಿಸಿನೆಸ್ ಮಾಡಬಹುದು, ಪರವಾಗಿಲ್ಲ ಎಂದುಕೊಂಡರು ತಂದೆ. ಕೇಳಲಿಲ್ಲ ಮಗ. ಬದಲಾಗಿ ಬ್ಯಾಂಕ್ ಒಂದರಲ್ಲಿ ಕೆಲಸಕ್ಕೆ ಸೇರಿಕೊಂಡ. “ಇನ್ನೂ ಕೇವಲ 24 ವರ್ಷ ವಯಸ್ಸು. ಈಗಲೇ ಕೆಲಸಕ್ಕೆ ಸೇರುವುದೇ?” ಒಪ್ಪಲಿಲ್ಲ ತಂದೆಯ ಮನಸ್ಸು. “ಯಾವ ಓದಾದರೂ ಸರಿ. ಯಾವ ದೇಶದ ಯಾವ ಯೂನಿವರ್ಸಿಟಿ ಆದರೂ ಸರಿ, ನಾನು ಫೀಸು ಕೊಡುತ್ತೇನೆ. ಓದನ್ನು ಮುಂದುವರೆಸು” ಎಂದು ಅಂಗಲಾಚಿದರು ಅಗರ್ವಾಲ್. ಮಗ ಒಂದೇ ಮಾತಿನಲ್ಲಿ ಹೇಳಿದ – “ನನ್ನ ಜೀವನದ ನಿರ್ದೇಶನ ನನ್ನ ಜವಾಬ್ದಾರಿ. ನೀವು ಮಧ್ಯೆ ಪ್ರವೇಶ ಮಾಡಬೇಡಿ.” ಸುಮ್ಮನಾದರು ತಂದೆ. ತಾಯಿ ಗಂಡನ ಪರ ವಹಿಸಿ ವಿನಂತಿ ಮಾಡಿಕೊಂಡರು; ಕೇಳಲಿಲ್ಲ ಮಗ.

ತಂದೆತಾಯಿಯರಿಂದ ದೂರನಾದ ಸುನಿಲ್ ಈಗ ತನ್ನ ಕಾಲಿನ ಮೇಲೆ ನಿಂತಿದ್ದ. ಯಾವುದಕ್ಕೂ ತಂದೆಯ ಸಹಾಯ ಬೇಕಿರಲಿಲ್ಲ. ಸಾಲದ್ದಕ್ಕೆ ಸಂಬಳವೂ ಸಾಕಷ್ಟು ಬರುತ್ತಿತ್ತು. ಸಾಕಷ್ಟು ಪುಸ್ತಕಗಳನ್ನು ಓದಿದ. ಸ್ವತಂತ್ರ ಆಲೋಚನೆ ಅವನಿಗೆ ಹುಟ್ಟುತ್ತಲೇ ಬಂದಿತ್ತು. ಈಗ ತನ್ನದೇ ಅದ ವ್ಯಕ್ತಿತ್ವವೂ ರೂಪುಗೊಂಡಿತು. ಅಪ್ಪನಲ್ಲಿ ತಾತ್ಸಾರ ಮೂಡಿತು. “ನನ್ನ ಅಪ್ಪನಲ್ಲಿ ದುಡ್ಡು ಬಿಟ್ಟು ಮತ್ತೇನೂ ಇಲ್ಲ. ಅಮ್ಮ ಅವನ ನೆರಳು ಅಷ್ಟೇ. ಜೀವನದಲ್ಲಿ ಹಣಕ್ಕಿಂತ